# ದೈವಾನುಗ್ರಹ



ಹಿಂದೆ ಪಾಂಡ್ಯ ರಾಜ್ಯವನ್ನು ಅನಂತಗುಣ ಪಾಂಡ್ಯ ಎಂಬ ರಾಜ ಪರಿಪಾಲಿಸುತ್ತಿದ್ದ. ಈತನು ಧರ್ಮಾತ್ಮನು. ಪ್ರಜೆಗಳನ್ನು ಸ್ವಂತ ಮಕ್ಕಳಂತೆ ಭಾವಿಸುತ್ತಾ ನ್ಯಾಯಯುತವಾಗಿ ರಾಜ್ಯ ಪರಿಪಾಲನೆ ಮಾಡುತ್ತಿದ್ದ.

ಒಂದು ದಿನ ಅದೇ ರಾಜ್ಯದಲ್ಲಿ ವಾಸ ಮಾಡುತ್ತಿದ್ದ ಒಬ್ಬ ಬ್ರಾಹ್ಮಣ ತನ್ನ ಹೆಂಡತಿ ಮಗುವೊಂದಿಗೆ ಪಕ್ಕದ ರಾಜ್ಯಕ್ಕೆ ಹೋಗಲು ಪ್ರಯಾಣ ಮಾಡಿದನು. ಮಟ ಮಟ ಮಧ್ಯಾಹ್ನದ ಸಮಯವಾಗಿದ್ದುದರಿಂದ ಮಾರ್ಗ ಮಧ್ಯದಲ್ಲಿರುವ ಅಡವಿಯೊಳಗೆ ಒಂದು ಮರದ ಕೆಳಗೆ ವಿಶ್ರಮಿಸಿದನು. ಹೆಂಡತಿ, ಮಗ ಮರದ ಕೆಳಗಿನ ನೆರಳಿನಲ್ಲಿ ನಿದ್ರೆಗೆ ಜಾರಿದರು. ಬ್ರಾಹ್ಮಣನಿಗೆ ದಾಹವಾಗಿದ್ದರಿಂದ ನೀರು ಕುಡಿಯಲು ಹೋದನು. ಮರದ ಮೇಲೆ ಹಿಂದೆ ಯಾವಾಗಲೋ ಸಿಕ್ಕಿಕೊಂಡ ಒಂದು ಮೊನಚಾದ ಬಾಣ ಅದೇ ಸಮಯಕ್ಕೆ ಬೀಸಿದ ಬಿರುಗಾಳಿಗೆ ಹಠಾತ್ತಾಗಿ ಜಾರಿ ಕೆಳಗೆ ಬಿತ್ತು. ಅದು ಮರದ ಕೆಳಗೆ ನಿದ್ರಿಸುತ್ತಿದ್ದ ಬ್ರಾಹ್ಮಣನ ಹೆಂಡತಿಗೆ ತಾಗಿತು. ಆಕೆ ಸತ್ತು ಹೋದಳು.

ಅದೇ ಸಮಯಕ್ಕೆ ಸರಿಯಾಗಿ ಒಬ್ಬ ಬೇಟೆಗಾರ ಮೃಗಗಳನ್ನು ಬೇಟೆಯಾಡಲು ಅತ್ತ ಕಡೆ ಬಂದನು. ನೆರಳಿರುವುದರಿಂದ ಆತನೂ ಪಕ್ಕದಲ್ಲಿದ್ದ ಮತ್ತೊಂದು ಮರದ ಕೆಳಗಿರುವ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಮಲಗಿದ. ಅಷ್ಟರಲ್ಲೇ ನೀರು ಕುಡಿಯಲು ಹೋದ ಬ್ರಾಹ್ಮಣ ಅಲ್ಲಿಗೆ ತಿರುಗಿ ಬಂದನು. ತನ್ನ ಹೆಂಡತಿ ಬಾಣ ಚುಚ್ಚಿಸಿಕೊಂಡು ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ನೋಡಿ ಗಳಗಳನೆ ಜೋರಾಗಿ ಅಳಲು ಆರಂಭಿಸಿದ.

ತನ್ನ ಹೆಂಡತಿಯನ್ನು ಯಾರೋ ಕೊಂದಿರಬಹುದೆಂದು ಸುತ್ತಮುತ್ತ ನೋಡಲು ಸಮೀಪದಲ್ಲಿದ್ದ ಮತ್ತೊಂದು ಮರದ ಕೆಳಗೆ ನಿದ್ರಿಸುತ್ತಿದ್ದ ಬೇಟೆಗಾರನನ್ನು ನೋಡಿದ. ಬ್ರಾಹ್ಮಣನ ಕೋಪದ ಕಟ್ಟೆ ಒಡೆಯಿತು. ಕೂಡಲೆ ಬೇಟೆಗಾರನ ಹತ್ತಿರ ಹೋಗಿ 'ದುರ್ಮಾರ್ಗಿ! ನನ್ನ ಹೆಂಡತಿಯನ್ನು ಅಕಾರಣವಾಗಿ ಕೊಂದೆಯಾ! ನಾನೇನು ನಿನಗೆ ಅಪಕಾರ ಮಾಡಿದ್ದೆ? ನಿನಗೆ ಶಿಕ್ಷೆ ತಪ್ಪದು' ಎಂದು ಹೇಳುತ್ತಾ ಜೋರಾಗಿ ಅಳಲು ಶುರು ಮಾಡಿದ.

ಇದನ್ನು ನೋಡಿದ ಬೇಟೆಗಾರನಿಗೆ ಗೊಂದಲವಾಯಿತು. ಅಸಲು ಏನು ಜರುಗಿತು ಎಂಬುದು ಕೂಡಾ ಅರ್ಥವಾಗದೆ ಗಾಬರಿಯಾಗಿ ನೋಡಿದ. 'ನಮ್ಮ ಮಹಾರಾಜ ಪಾಂಡ್ಯ ರಾಜರ ಮೇಲೆ ಆಣೆ. ನೀನು ನನ್ನೊಂದಿಗೆ ರಾಜ ದರ್ಬಾರಿಗೆ ಬರಲೇಬೇಕು' ಎಂದ ಬ್ರಾಹ್ಮಣ.

ಮಹಾರಾಜರ ಮೇಲೆ ಆಣೆ ಮಾಡಿದುದರಿಂದ ಇಲ್ಲ ಎನ್ನದೆ ಆ ಬೇಟೆಗಾರ ಹೊರಟ. ಅವನ ಹಿಂದೆ ಸತ್ತ ಹೆಂಡತಿಯ ಶವವನ್ನು ಭುಜದ ಮೇಲೆ ಹೊತ್ತುಕೊಂಡು, ಮತ್ತೊಂದು ಕೈಯಲ್ಲಿ ಮಗುವನ್ನು ಹಿಡಿದುಕೊಂಡು ಬೇಟೆಗಾರನನ್ನು ಹಿಂಬಾಲಿಸುತ್ತಾ ಪಾಂಡ್ಯರಾಜನ ಸಭೆಗೆ ಬ್ರಾಹ್ಮಣ ಬಂದನು. 'ಮಹಾರಾಜ! ನನ್ನ ಹೆಂಡತಿಯನ್ನು ಈ ಬೇಟೆಗಾರ ಅಕಾರಣವಾಗಿ ಕೊಂದಿದ್ದಾನೆ. ಈತನಿಗೆ ಕಠಿಣವಾಗಿ ಶಿಕ್ಷಿಸುವ ಮೂಲಕ ನೀವು ನನಗೆ ನ್ಯಾಯ ಕೊಡಬೇಕು' ಎಂದನು.

ಆಗ ಬೇಟೆಗಾರ ಗಡಗಡನೆ ನಡುಗುತ್ತಾ 'ಮಹಾರಾಜರೇ! ಇದು ನನಗೇನೂ ತಿಳಿಯದು. ನಾನು ಅಡವಿಯಲ್ಲಿ ಬೇಟೆಯಾಡುತ್ತಾ ಬಂದು ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಾ ಇರಲು, ಈ ಬ್ರಾಹ್ಮಣ ನಿಮ್ಮ ಮೇಲೆ ಆಣೆ ಹಾಕಿ ನನ್ನನ್ನು ಇಲ್ಲಿಗೆ ಕರೆದುತಂದನು' ಎಂದು ಬೇಡಿಕೊಂಡನು. ರಾಜನೊಂದಿಗೆ ಸಹ ಸಭೆಯಲ್ಲಿದ್ದವರೆಲ್ಲರೂ ಬೇಟೆಗಾರನ ಮಾತನ್ನು ನಂಬಲಿಲ್ಲ.

ಆಗ ಪಾಂಡ್ಯ ರಾಜ 'ಹಾಗಾದರೆ ಆಕೆಯ ಶರೀರಕ್ಕೆ ಬಾಣ ಹೇಗೆ ಚುಚ್ಚಿಕೊಂಡಿತು? ಸುಳ್ಳು ಹೇಳದೇ ನಿಜವನ್ನು ಒಪ್ಪಿಕೋ' ಎಂದ. 'ನಿಜವನ್ನೇ ಹೇಳುತ್ತೇನೆ ಮಹಾರಾಜ. ನಾನು ಆಕೆಯನ್ನು ಕೊಲ್ಲಲಿಲ್ಲ!' ಎಂದು ಮತ್ತೊಂದು ಸಾರಿ ಬೇಟೆಗಾರ ಹೇಳುತ್ತಿರಲು ರಾಜಾಜ್ಞೆಯಂತೆ ಭಟರು ಬಂದು ಬೇಟೆಗಾರನನ್ನು ಕಾರಾಗೃಹಕ್ಕೆ ತಳ್ಳಿದರು ಮತ್ತು ಅನೇಕ ವಿಧವಾಗಿ ಚಿತ್ರಹಿಂಸೆಗೆ ಗುರಿ ಮಾಡಿದರು. ಆದರೂ ಅವರ ಪ್ರಯತ್ನಗಳೆಲ್ಲಾ ವಿಫಲವಾದವು. ಎಷ್ಟು ಹಿಂಸೆಗೊಳಪಡಿಸಿದರೂ ಆತನು 'ನನಗೇನೂ ತಿಳಿಯದು' ಎಂದು ಹೇಳುತ್ತಾ ಸಾಗಿದನು. ಭಟರು ಬಂದು ರಾಜನಿಗೆ ಎಲ್ಲಾ ವೃತ್ತಾಂತವನ್ನು ತಿಳಿಸಿದರು. ಪಾಂಡ್ಯ ರಾಜನಿಗೆ ಏನೂ ತೋಚದಂತಾಯಿತು.

ಮಾರನೆಯ ದಿನ ಬೆಳಿಗ್ಗೆ ತನ್ನ ಪೂಜಾ ಮಂದಿರದಲ್ಲಿ ಧ್ಯಾನಮಗ್ನನಾಗಿರಲು ತನ್ನ ಇಷ್ಟ ದೈವವಾದ ಸೋಮಸುಂದರೇಶ್ವರನಲ್ಲಿ ಪ್ರಾರ್ಥಿಸಿದನು. 'ಹೇ! ದೇವಾ ಈ ಸಮಸ್ಯೆಯನ್ನು ಹೇಗಾದರೂ ಪರಿಹರಿಸು' ಎಂದು ಬೇಡಿಕೊಂಡ.

ಆಗ ಅಶರೀರವಾಣಿ 'ರಾಜಾ ಈ ದಿನ ನಿನ್ನ ರಾಜ್ಯದಲ್ಲಿ ಒಂದು ವಿವಾಹ ಜರುಗುತ್ತದೆ. ನೀನು ಆ ಬ್ರಾಹ್ಮಣನೊಂದಿಗೆ ಮಾರುವೇಷದಲ್ಲಿ ಆ ವಿವಾಹಕ್ಕೆ ಹೊರಡು. ನಿಜ ಏನೆಂಬುದು ನಿಮಗೇ